

ಇಳಿ ಸಂಜೆಯ ಹೊತ್ತಿಗೆ ಸೀತಾಳೆ ದಂಡೆಯ ನರುಗಂಪಿನ ಜಾಡು ಹಿಡಿದು ಮೈಸೂರಿನ ವಿಜಯನಗರ ಬಡಾವಣೆಯಲ್ಲಿರುವ 'ಗೌರಿ' ಎಂಬ ಆ ಮನೆಗೆ ಹೋದರೆ ನಗು ಮುಖದ ದಂಪತಿ ಗೇಟಿನಾಚೆ ಬಂದು ಸ್ವಾಗತಿಸಿದರು. ಒಂದಿಷ್ಟೂ ಬಿಂಕ, ಬಿಗುಮಾನದ ಸೋಲ್ಲಿಲ್ಲದ ಮುಖ; ಮನೆಯೊಳಗೆ ಅಡಿಯಿಟ್ಟರೆ ಮೆಚ್ಚಿಗೆ ಮುಚ್ಚಿಡಲಾಗದ ಅಚ್ಚುಕಟ್ಟು, ಸರಳತೆ, ಒಪ್ಪ ಓರಣ. ನಲವತ್ತು ವರ್ಷಕ್ಕೂ ಮೀರಿ ಓದುಗರನ್ನು ಒಲಿಸಿಕೊಳ್ಳುವಂತೆ ನಿರಂತರ ಬರೆದ ಕನ್ನಡದ ಲೇಖಕಿ ಅವರು. ತಮ್ಮ ಕತೆ, ಪ್ರಬಂಧ, ಕಾದಂಬರಿಗಳ ಮೂಲಕ ಜನಮೆಚ್ಚುಗೆ ಪಡೆದ ಅವರ ಮುಖಬಿಂಬದಲ್ಲಿ ಆ ಕುರಿತು ಸಣ್ಣ ಅಹಂನ ಸುಳಿವೂ ಕಾಣಿಸದು. ಅವರ ಬರಹಗಳ ಸರಳ, ತಾಜಾ ಅಭಿವ್ಯಕ್ತಿಯಷ್ಟೇ ಅವರ ಮಾತುಕತೆ, ವ್ಯಕ್ತಿತ್ವ.

ಅವರು ವಸುಮತಿ ಉಡುಪ.

ಲೇಖಕಿ ವಸುಮತಿ ಉಡುಪ ಹುಟ್ಟಿದ್ದು ಅವರ ತಾಯಿಯ ತವರೂರು ಶಿವಮೊಗ್ಗ ಜಿಲ್ಲೆ, ಹೊಸನಗರ ತಾಲ್ಲೂಕಿನ ನಗರದಲ್ಲಿ. ಅವರ ತವರೂರು ತೀರ್ಥಹಳ್ಳಿ ತಾಲ್ಲೂಕಿನ ಕಿರಣಕೆರೆ.